# ಭಾರತೀಯ ಧರ್ಮದಲ್ಲಿ ಮಹಿಳೆ ಮತ್ತು ಧರ್ಮ

**ಕೆ. ಶಾಲಿನಿ[1] & ಮೋಹನ್ ಎಂ.[2]**

[1]ಪ್ರಾಧ್ಯಾಪಕಿ, ಆರ್.ಜೆ.ಎಸ್ ಪ್ರಥಮ ದರ್ಜೆ ಕಾಲೇಜು, ಕೋರಮಂಗಲ, ಬೆಂಗಳೂರು.

[2]ಸಹಾಯಕ ಪ್ರಾಧ್ಯಾಪಕರು, ಆರ್.ಜೆ.ಎಸ್ ಪ್ರಥಮ ದರ್ಜೆ ಕಾಲೇಜು, ಕೋರಮಂಗಲ, ಬೆಂಗಳೂರು.

**DOI: https://doi.org/10.5281/zenodo.18785039**

## ABSTRACT:

ಭಾರತೀಯ ಸಂಸ್ಕೃತಿಯಲ್ಲಿ ಮಹಿಳೆಯ ಸ್ಥಾನಮಾನವು ಅನಾದಿ ಕಾಲದಿಂದಲೂ ಬದಲಾವಣೆಗಳಿಗೆ ಒಳಪಡುತ್ತಲೇ ಬಂದಿದೆ. ನಾಗರಿಕತೆಯ ಆರಂಭದ ಮಾತೃಪ್ರಧಾನ ವ್ಯವಸ್ಥೆಯಲ್ಲಿ ಪೂಜ್ಯಭಾವನೆ ಹೊಂದಿದ್ದ ಸ್ತ್ರೀ, ಕಾಲಕ್ರಮೇಣ ಪುರುಷ ಪ್ರಧಾನವಾದ ಧಾರ್ಮಿಕ ಚೌಕಟ್ಟಿನಲ್ಲಿ ಶೋಷಣೆಗೆ ಒಳಗಾದ ಐತಿಹಾಸಿಕ ಹಿನ್ನೆಲೆಯನ್ನು ಇಲ್ಲಿ ಗುರುತಿಸಲಾಗಿದೆ. ವೈದಿಕ, ಬೌದ್ಧ, ಜೈನ, ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳು ಮಹಿಳೆಯರ ಸ್ವಾತಂತ್ರ್ಯವನ್ನು ನಿಯಂತ್ರಿಸಿದ ಬಗೆ ಹಾಗೂ ಮನುಸ್ಮೃತಿಯಂತಹ ಗ್ರಂಥಗಳು ವಿಧಿಸಿದ ನಿರ್ಬಂಧಗಳನ್ನು ವಿಶ್ಲೇಷಿಸಲಾಗಿದೆ. ಸ್ಥಾಪಿತ ಧರ್ಮಗಳ ಈ ಕಟ್ಟುಪಾಡುಗಳನ್ನು ಧಿಕ್ಕರಿಸಿ, ವಚನ ಚಳವಳಿ ಹಾಗೂ ಭಕ್ತಿ ಪಂಥದ ಮೂಲಕ ಅಕ್ಕಮಹಾದೇವಿ ಮತ್ತು ಮೀರಾಬಾಯಿಯಂತಹ ಸಾಧಕಿಯರು ಕಂಡುಕೊಂಡ ಆಧ್ಯಾತ್ಮಿಕ ಬಿಡುಗಡೆ ಮತ್ತು ಸಮಾನತೆಯ ಮಾರ್ಗಗಳನ್ನು ಪ್ರಮುಖವಾಗಿ ಚರ್ಚಿಸಲಾಗಿದೆ.

## KEYWORDS:

ಭಾರತೀಯ ಧರ್ಮಗಳು, ಪಿತೃಪ್ರಧಾನ ವ್ಯವಸ್ಥೆ, ಮಹಿಳಾ ಶೋಷಣೆ, ಭಕ್ತಿ ಪಂಥ, ವಚನ ಚಳವಳಿ.

ಆಧುನಿಕ ಸಂದರ್ಭದಲ್ಲಿ ಮಹಿಳೆ ಅನೇಕ ರಂಗಗಳಲ್ಲಿ ಪ್ರಗತಿಯನ್ನು ಸಾಧಿಸಿದ್ದಾಳೆ. ಆದರೆ ಅನಾದಿ ಕಾಲದಿಂದಲೂ ಮಹಿಳೆ ಶೋಷಣೆಯನ್ನು ಅನುಭವಿಸುತ್ತಾ ಪುರುಷನಿಗೆ ಸಮಾನವಾಗಿ ಹೋರಾಡುತ್ತಿದ್ದಾಳೆ. ಇಂದಿಗೂ ಕೂಡಾ ಶೋಷಣೆಯಿಂದ ಮುಕ್ತವಾಗಿಲ್ಲ. ನಾವಿಂದು ಮಹಿಳೆ ಮತ್ತು ಪುರುಷರ ಸಮಸ್ಯೆಗಳು ಬೇರೆ ಬೇರೆ ಎಂದು ವರ್ಗೀಕರಣ ಮಾಡಿಕೊಂಡರೂ, ಆಳದಲ್ಲಿ ಅವುಗಳ ಆಂತರ್ಯ ಒಂದೇ ಆಗಿರುವುದು ಸೂಕ್ಷ್ಮ ಮನಸ್ಸುಗಳ ಗಮನಕ್ಕೆ ಬಾರದೆ ಇರಲಾರದು. ಜೀವನದ ಅನೇಕ ಸಮಸ್ಯೆಗಳಿಗೆ ಇಬ್ಬರೂ ಕೂಡಿ ಸರಿಯಾದ ದಾರಿ ಕಂಡುಕೊಳ್ಳಬೇಕಾದ ಅನಿವಾರ್ಯತೆ ಇದೆ. ಉತ್ತರ ಭಾರತವು ಅನೇಕ ಧರ್ಮಗಳಿಗೆ ಜನ್ಮ ನೀಡಿರುವಂತದ್ದು. ಈ ನೆಲದಲ್ಲಿ ಪ್ರಾಚೀನ ಕಾಲದಿಂದ ಇಲ್ಲಿಯವರೆಗೆ ಈ ಎಲ್ಲಾ ಧರ್ಮಗಳಲ್ಲಿ ಮಹಿಳೆಯನ್ನು ಪರಿಗಣಿಸಿದ ಬಗೆಯನ್ನು ಅಧ್ಯಯನ ಮಾಡಲು ನಮಗೆ ಚರಿತ್ರೆಯ ಪುಟಗಳು ಆಧಾರ ಒದಗಿಸುತ್ತವೆ.

ಮಾನವನು ನಾಗರಿಕತೆಯ ಆರಂಭದ ಕಾಲದಲ್ಲಿ ಬೇಟೆ, ಅಲೆಮಾರಿ ಜೀವನ, ಪಶುಸಂಗೋಪನೆ ಹಾಗೂ ಕೃಷಿ ಪ್ರಧಾನ ಹಂತ ದಾಟಿ ಬಂದ ನಂತರ, ಮಾನವನು ಸಾಮಾಜಿಕ ಜೀವನದಲ್ಲಿ ಕುಟುಂಬ, ವಿವಾಹ, ಧರ್ಮ ಸಂಸ್ಥೆಗಳಿಗೆ ಒಳಪಟ್ಟನು. ಇದು ಮಾನವನ ಸಾಮೂಹಿಕ ಜೀವನದ ಮೊದಲ ಹಂತ. ಬೆಳೆದು ಮನುಷ್ಯ ವೈಯಕ್ತಿಕ ಹಿತಾಸಕ್ತಿಗಿಂತಲೂ ಸಾಮೂಹಿಕ ಹಿತಾಸಕ್ತಿಗೆ ಸೇರುವುದರ ಮೂಲಕ ಸಾಮಾಜಿಕ ಸ್ವಾಸ್ಥ್ಯ ಕಾಪಾಡುವುದು. ಈ ಬದ್ಧತೆ ಎಲ್ಲ ಸದಸ್ಯರಲ್ಲಿ ಒಂದೇ ರೀತಿಯಾಗಿ ಅರ್ಥೈಸುವಿಕೆ, ಸಮಾನ ಸಾಮಾಜಿಕ ಸ್ಥಾನಮಾನ ದೊರಕಿದ್ದರೆ, ಮಹಿಳೆ ಮತ್ತು ಪುರುಷರ ನಡುವೆ ಭಿನ್ನತೆಗಳು ಉದ್ಭವಿಸುತ್ತಿರಲಿಲ್ಲ. ಪುರುಷ ಪ್ರಧಾನ ಆಲೋಚನೆಗಳ ಮೂಲಕ ಬೆಳೆದು ಬಂದ ಧರ್ಮವು ತನಗಿಷ್ಟ ಬಂದಂತೆ ನ್ಯಾಯ, ನೀತಿ, ನಂಬಿಕೆ, ಆಚರಣೆಗಳನ್ನು ಬೆಳೆಸಿ ಮಹಿಳೆಯರ ಬಗೆಗೆ ಕಠಿಣ ಧೋರಣೆ ತಾಳಿ, ಪುರುಷ ನಡೆಸುವ ದೌರ್ಜನ್ಯ ಕಾರ್ಯಕ್ಕೆ ಧರ್ಮಶಾಸ್ತ್ರಗಳನ್ನು ಬೆಂಬಲಿಸಿ, ಎಲ್ಲಾ ಆಲೋಚನೆಗಳನ್ನು ಪುರುಷ ಪರವಾಗಿ ಮಾಡಿ ಮಹಿಳಾ ವಿರೋಧಿಯಾಗಿಸಿ, ಪುರುಷ ಧಾರ್ಮಿಕ ಚೌಕಟ್ಟಿನಲ್ಲಿ ಮಹಿಳೆಯನ್ನು ಬಂಧಿಯಾಗಿಸಿರುವ ಸಾಕಷ್ಟು ಉದಾಹರಣೆಗಳು ನಮ್ಮ ಇತಿಹಾಸದ ಪುಟಗಳಲ್ಲಿ ಚಿತ್ರಿತವಾಗಿವೆ.

ಭಾರತೀಯ ಇತಿಹಾಸದ ಆರಂಭ ಕಾಲದಲ್ಲಿ ಮಾತೃಪ್ರಧಾನ ವ್ಯವಸ್ಥೆ ಸಾಂಪ್ರದಾಯಿಕವಾಗಿ ರೂಪಗೊಂಡಿದ್ದಾಗಿತ್ತು. ಈ ವ್ಯವಸ್ಥೆ ಅಧಿದೇವತೆಯಾದ ಜಗನ್ಮಾತೆಯನ್ನು ಸೃಷ್ಟಿಸಿ, ಮಹಿಳೆಯನ್ನು ಸೃಷ್ಟಿ ಶಕ್ತಿಯಾಗಿ ನಿರ್ಮಿಸಲಾಯಿತು. ಈ ರೀತಿ ಸೃಷ್ಟಿ ಸ್ಥಿತಿಯ ಅನೇಕ ಸಂಕಥನಗಳು ನಮ್ಮ ಜನಪದ ಕಾವ್ಯಗಳಲ್ಲಿ ಕಂಡುಬರುತ್ತವೆ. ಉದಾಹರಣೆಗೆ: ಮಂಟೇಸ್ವಾಮಿ ಜನಪದ ಮಹಾಕಾವ್ಯದಲ್ಲಿ ಮೊದಲು ಜಗನ್ಮಾತೆಯನ್ನು ಸೃಷ್ಟಿಸಿ ಜನಪದರು, ನಂತರ ಮಂಟೇಸ್ವಾಮಿ ಸೃಷ್ಟಿಸಿದ್ದನ್ನು ನೋಡಬಹುದು.

ಈ ಸೃಷ್ಟಿ ತತ್ವದ ವಿಕಾಸದ ಚರಿತ್ರೆಯಲ್ಲಿ ಕಾಲಕ್ರಮೇಣವಾಗಿ ಪುರುಷನು

ಆಕ್ರಮಿಸುತ್ತಾ ಬಂದನು. ಸ್ತ್ರೀ ತತ್ವವನ್ನು ಹಿಂದಕ್ಕೆ ತಳ್ಳುವ ಹಾಗೂ ಮಹಿಳೆ ಈ ಮೂಲಕ ಮಾಯಾ ಚರಿತ್ರೆಗೆ ನೂಕಲ್ಪಟ್ಟಳು. ಮುಂದುವರೆದು ಅಷ್ಟೇ ಅಲ್ಲದೇ ಪುರುಷನ ಆಧ್ಯಾತ್ಮಿಕ ಸಾಧನೆಗೆ ಹೆಣ್ಣು ಅಡಿಯೆಂಬ ವ್ಯಾಖ್ಯಾನಗಳು ಸೃಷ್ಟಿಯಾದವು. ಮಹಿಳೆ ಮೋಕ್ಷಕ್ಕೆ ಅನರ್ಹಳೆಂದು ಘೋಷಿಸಲಾಯಿತು. ಮಹಿಳೆಯನ್ನು ಆಯಾ ಧರ್ಮ ತಮ್ಮ ತಮ್ಮ ಧಾರ್ಮಿಕ ಸಿದ್ಧಾಂತಗಳ ಚೌಕಟ್ಟಿನಲ್ಲಿ ಬಂಧಿಸಿ, ಪುರುಷನು ಮಹಿಳೆಯನ್ನು ತನ್ನ ಸಮಾನಳೆಂದು ಭಾವಿಸದೇ, ಅವಳನ್ನು ಅಪವಿತ್ರ, ಮಲೀನ, ಪಾಪಿಷ್ಠಳು ಹಾಗೂ ಮಾಯೆ ಎಂದು ಕರೆದರು. ಇಲ್ಲಿ ಧಾರ್ಮಿಕ ಪಂಥಗಳು ಮಹಿಳೆಯನ್ನು ಕೆಲವೊಂದು ಧಾರ್ಮಿಕ ಸ್ಥಳಗಳಲ್ಲಿ ಪ್ರವೇಶವನ್ನು ನಿರಾಕರಿಸುತ್ತಾ ಬಂದವು.

ಸ್ಥಾಪಿತ ಧರ್ಮಗಳಲ್ಲಿ ಮಹಿಳೆ: ವೈದಿಕ ಧರ್ಮ ಮತ್ತು ಮಹಿಳೆ

ಪ್ರಾಚೀನ ಭಾರತದಲ್ಲಿ ಮೊದಲು ಮಾತೃಪ್ರಧಾನ ಕುಟುಂಬ ವ್ಯವಸ್ಥೆ ರೂಢಿಯಲ್ಲಿತ್ತು. ಆರ್ಯರು ಭಾರತಕ್ಕೆ ಆಗಮನದೊಂದಿಗೆ, ಮಹಿಳೆಯ ವಾಸ್ತವ ವ್ಯಕ್ತಿತ್ವವನ್ನು ಹಿಂದಕ್ಕೆ ತಳ್ಳಿ, ಆ ಸ್ಥಾನವನ್ನು ಪುರುಷ ರಾಜಕಾರಣಗಳು ಆಕ್ರಮಿಸುತ್ತಾ ಬಂದವು. ಮೂಲ ವೇದ ಕಾಲದಲ್ಲಿ ಮಹಿಳೆಯನ್ನು ಗೌರವದಿಂದ, ಪೂಜ್ಯ ಭಾವನೆಯಿಂದ ಕಾಣುತ್ತಾ ಬಂದಿರುವ ಪುರುಷನು, ಅವಳನ್ನು ಯಜ್ಞಯಾಗಾದಿಗಳ ಸಂದರ್ಭದಲ್ಲಿ ಧಾರ್ಮಿಕ ಕಾರ್ಯಕ್ರಮಗಳ ಯಶಸ್ವಿಗಾಗಿ ಬಳಸಿಕೊಂಡರು. ಅದರಾಚೆ ಅವಳನ್ನು ಭೋಗದ ವಸ್ತುವನ್ನಾಗಿ ಬಳಸಿಕೊಂಡಿದ್ದು ಚರಿತ್ರೆಯ ಪುಟಗಳಿಂದ ತಿಳಿದು ಬರುತ್ತದೆ. ಉದಾಹರಣೆಗೆ ಅಶ್ವಮೇಧ ಯಾಗ ಮಾಡುವ ಸಂದರ್ಭದಲ್ಲಿ ಯಾಗ ಮಾಡುವ ಯಜಮಾನನ ಪತ್ನಿಯೂ ಈ ಕಾರ್ಯದಲ್ಲಿ ಭಾಗಿಯಾಗುತ್ತಿರುವದು ಅಷ್ಟೇ ಅಲ್ಲದೇ ಯಜಮಾನನ ಉಪಪತ್ನಿಯರು ಸಹ ಭಾಗಿಯಾಗಿರುವ ಉದಾಹರಣೆಗಳಿವೆ. ರಾಮಾಯಣದ ಕಾಲದಲ್ಲಿ ದಶರಥ ಮಹಾರಾಜ ಅಶ್ವಮೇಧ ಯಾಗದಲ್ಲಿ ಅವನ ರಾಣಿಯರು ಭಾಗವಹಿಸಿರುವುದನ್ನು ಚರಿತ್ರೆಯ ಪುಟಗಳಲ್ಲಿ ನೋಡಬಹುದು. ಕೌಸಲ್ಯ ದೇವಿ ಸಮೇತವಾಗಿ ದಶರಥ ಮಹಾರಾಜ ಯಾಗಕುಂಡದಲ್ಲಿ ಅಗ್ನಿ ಪ್ರಜ್ವಲನೆ ಮಾಡಿರುವುದು, ಇದಕ್ಕೆ ಸಹಾಯಕವಾಗಿ ಉಪಪತ್ನಿಯರು ಸುಮಿತ್ರೆ ಮತ್ತು ಕೈಕೇಯಿ ಭಾಗಿಯಾಗಿರುವುದು. ಪವಿತ್ರವಾಗಿರುವ (ಆಗಿನ ಕಾಲಕ್ಕೆ) ಈ ಅಶ್ವಮೇಧ ಯಾಗದಲ್ಲಿ ಯಜಮಾನನ ಪತ್ನಿಯನ್ನು ಅಶ್ವದ ಜೊತೆಯಲ್ಲಿ ಸಂಭೋಗಕ್ಕೆ ತೊಡಗಿಸುವುದು, ಇದು ಮನುಕುಲಕ್ಕೆ ಒಂದು ಮುಜುಗರದ ಸಂಗತಿ. ಅದರ ಜೊತೆಯಲ್ಲಿ ಉಪಪತ್ನಿಯರು ಯಜ್ಞ ಕಾರ್ಯದ ಋತ್ವಿಜರ ಜೊತೆಯಲ್ಲಿ ಸಂಭೋಗಿಸಬೇಕು. ಈ ನಿಯಮ ಪ್ರಾಚೀನ ಕಾಲದ ಯಜುರ್ವೇದ ಸಂಹಿತೆಯಲ್ಲಿನ ಮಂತ್ರಗಳಿಂದ ನಾವು ನೋಡಬಹುದು. ಈ ಕ್ರಿಯೆಯನ್ನು ಗಮನಿಸಿದಾಗ ಸನಾತನ ಧರ್ಮದಲ್ಲಿ ಸ್ತ್ರೀಯರು ಶೋಷಣೆಗೆ ಹೇಗೆ ಒಳಗಾಗಿದ್ದಾರೆ ಎಂಬ ವಿಷಯ ಚರಿತ್ರೆಯ ಪುಟಗಳನ್ನು ತಿರುಚಿದಾಗ ಗೋಚರಿಸುವಂತದ್ದು.

ಮನು ತನ್ನ 'ಮನುಸ್ಮೃತಿ'ಯಲ್ಲಿ "ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೆ ತತ್ರ ದೇವತಾ" ಎಂದು ಹೇಳಿ, 'ಯಾವ ಮನೆಯಲ್ಲಿ ಮಹಿಳೆಯು ಪೂಜಿಸಲ್ಪಡುತ್ತಾಳೋ, ಆ ಮನೆಯಲ್ಲಿ ನಡೆಯುವಂತ ಯಜ್ಞ ಯಾಗಾದಿಗಳು ಫಲಕಾರಿಯಾಗುತ್ತವೆ ಮತ್ತು ಆ ಮನೆಯಲ್ಲಿ ದೇವಾನುದೇವತೆಗಳು ನೆಲೆಸುತ್ತಾರೆ' ಎಂದು ಹೇಳುತ್ತಾನೆ. ಈ ರೀತಿ ಮಹಿಳೆಯ ಬಗ್ಗೆ ಸಕಾರಾತ್ಮಕವಾಗಿ ಹೇಳಿದ ಮನು, ತನ್ನ ಗ್ರಂಥದಲ್ಲಿ ನಿತ್ಯ ಯಜ್ಞಗಳನ್ನು ಸ್ತ್ರೀಯರು ಮಾಡಬಾರದು, ಹಾಗೆ ಮಾಡಿದರೆ ಅವಳು ನರಕಕ್ಕೆ ಹೋಗುತ್ತಾಳೆ ಎನ್ನುತ್ತಾನೆ. ಸ್ತ್ರೀಯರು ನೆರವೇರಿಸಿದ ಯಜ್ಞದಲ್ಲಿ ಬ್ರಾಹ್ಮಣ ಊಟಮಾಡಬಾರದು, ಸ್ತ್ರೀಯರು ಆಚರಿಸಿದ ಯಜ್ಞಗಳು ಅಮಂಗಳಕರವಾದವುಗಳೆಂದು ಹೇಳಿ 'ನ ಸ್ತ್ರೀ ಸ್ವಾತಂತ್ರ್ಯಂ ಅರ್ಹತಿ' ಎಂದು ಹೇಳುವ ಮೂಲಕವಾಗಿ, ಸರ್ವ ರೀತಿಯಿಂದಲೂ ಅವಳು ಬಾಲ್ಯದಲ್ಲಿ ಮಗಳಾಗಿ ತಂದೆಯ ಆಶ್ರಯ, ಯೌವನದಲ್ಲಿ ಗಂಡನ ಆಶ್ರಯ, ಮುಪ್ಪಿನಲ್ಲಿ ಮಕ್ಕಳ ಆಶ್ರಯದಲ್ಲಿ ಇರಬೇಕಾಗಿರುವುದರಿಂದ ಅವಳು ಸ್ವಾತಂತ್ರ್ಯಕ್ಕೆ ಅನರ್ಹಳು ಎಂದು ಹೇಳುತ್ತಾನೆ. ಈ ಮಾತಿಗೆ ಧಾರ್ಮಿಕವಾದ ಕಟ್ಟಪ್ಪಣೆಗಳನ್ನು ವಿಧಿಸಿ ನಾಲ್ಕು ಗೋಡೆಗಳ ಮಧ್ಯೆ ವಾಸಿಸುವಂತೆ ಮಾಡಿರುವುದು ಕಂಡುಬರುತ್ತದೆ.

## ಬೌದ್ಧ ಧರ್ಮ ಮತ್ತು ಮಹಿಳೆ

ಬೌದ್ಧ ಧರ್ಮವು ಶ್ರಮಣ ಧರ್ಮವಾಗಿರುವುದರಿಂದ ತನ್ನ ಧಾರ್ಮಿಕ ಚಹರೆಯಲ್ಲಿ ಹೆಣ್ಣಿಗೆ ಅವಕಾಶಗಳನ್ನು ನೀಡಿರಲಿಲ್ಲ. ತನ್ನ ಸಾಕು ತಾಯಿಯಾದ ಪ್ರಜಾಪತಿಯ ಒತ್ತಾಯದ ಮೇರೆಗೆ ಕೊನೆಗೆ ಭಿಕ್ಷುಣಿಯಾಗಿರಲು ಸಮ್ಮತಿಸಿರುವನು. ಬುದ್ಧನ ಕಾಲದಲ್ಲಿ ಬಾಲ್ಯ ವಿವಾಹ ಪದ್ಧತಿ ಜಾರಿಯಲ್ಲಿರಲಿಲ್ಲ, ಹದಿನಾರು ಅಥವಾ ಇಪ್ಪತ್ತು ವರ್ಷ ವಿವಾಹದ ವಯಸ್ಸಾಗಿತ್ತು. ಅವಿವಾಹಿತ ಕನ್ಯೆಗೆ ಮರ್ಯಾದೆ ಇತ್ತು. ಬುದ್ಧ ಸ್ತ್ರೀಯರನ್ನು ತಮ್ಮ ಸಂಘಕ್ಕೆ ಸೇರಿಸಿಕೊಂಡ ಪಕ್ಷದಲ್ಲಿ ಬೌದ್ಧ ಧರ್ಮವು ಸಾವಿರಾರು ವರ್ಷಗಳಾಚೆಗೆ ಬಾಳುತ್ತಿತ್ತು. ಈಗ ಬೌದ್ಧ ಧರ್ಮಕ್ಕೆ ನಾರಿಯರ ಪ್ರವೇಶದಿಂದ ಅದರ ಆಯಸ್ಸು ಕ್ಷೀಣಿಸುತ್ತದೆ, ಅದು ಐದುನೂರು ವರ್ಷಗಳಷ್ಟು ಬದುಕುಳಿಯುವುದು ಕಷ್ಟ. ಇದರಿಂದ ಪುರುಷನು ಮೋಕ್ಷ ಹೊಂದುವದಕ್ಕೆ ಸ್ತ್ರೀಯು ಅಡ್ಡಿಯಾಗುತ್ತಾಳೆ ಎಂದು ಭಾವಿಸಿರುವುದು ಬುದ್ಧನ ಮನಸ್ಸಿನಲ್ಲಿ ಸ್ತ್ರೀಯರ ಬಗೆಗೆ ನಿರ್ಲಕ್ಷ್ಯ ಭಾವನೆ ತೋರಿರುವುದು ಇದರಿಂದ ಗಮನಕ್ಕೆ ಬರುವಂತದ್ದು. ಬುದ್ಧನ ಕಾಲದಲ್ಲಿ ಸ್ತ್ರೀಯರಿಗೂ ಅನೇಕ ರೀತಿಯಾದ ಅವಕಾಶ ಕಲ್ಪಿಸಿರುವುದು, ಕೌಟುಂಬಿಕ ಜೀವನದಲ್ಲಿ ಸಮಾನತೆ, ಸಾಮಾಜಿಕ, ಧಾರ್ಮಿಕ, ಆರ್ಥಿಕ ವಿಷಯದಲ್ಲಿ ಸ್ತ್ರೀಗೆ ಅಗ್ರ ಪೂಜೆಯನ್ನು ನೀಡಿರುವುದು ಕಂಡುಬರುವಂತವುಗಳಾಗಿ, ಕೆಲವು ಕಾಲದ ನಂತರ ಸ್ತ್ರೀಯರು ಬೌದ್ಧ ಭಿಕ್ಷುಣಿಯಾಗಿರುವುದು ನೋಡಬಹುದು.

## ಜೈನ ಧರ್ಮ ಮತ್ತು ಮಹಿಳೆ

ಇದು ಬೌದ್ಧ ಧರ್ಮದಂತೆ ಶ್ರಮಣ ಧರ್ಮವಾಗಿರುವುದರಿಂದ, ಇಲ್ಲಿ ಬರುವ 24 ತೀರ್ಥಂಕರರಲ್ಲಿ ಒಬ್ಬ ಸ್ತ್ರೀಯೂ ಇಲ್ಲದಿರುವುದನ್ನು ನೋಡಿದರೆ, ಇದು

ಕೂಡಾ ಸ್ತ್ರೀಗೆ ಹೆಚ್ಚಿನ ಪ್ರಾಶಸ್ತ್ಯ ನೀಡದೇ ಇರುವಂತದ್ದು. ಕ್ರಿ.ಪೂ. ದಲ್ಲಿ ಹುಟ್ಟಿರುವ ಈ ಧರ್ಮ ಸ್ತ್ರೀಯರಿಗೆ ಸನ್ಯಾಸತ್ವ ಸ್ವೀಕರಿಸಲು ಮಾತ್ರ ಅವಕಾಶ ನೀಡಿರುವಂತದ್ದು. ಬುದ್ಧನಿಗಿಂತ ಒಂದೆರಡು ಶತಮಾನಗಳ ಮುಂಚೆ ಸ್ವತಂತ್ರ ಸಂಘಗಳು ನಿರ್ಮಾಣಗೊಂಡಿದ್ದು, ಅವುಗಳಲ್ಲಿ ಎಲ್ಲಕ್ಕೂ ಮುಂಚಿನವೆಂದರೆ ಜೈನ ಸಾಧ್ವಿಯರ ಸಂಘ ಎನಿಸುತ್ತವೆ. ಈ ಜೈನ ಕಾಂತಿಯರು ಯಾರ ಅಪ್ಪಣೆ ಕೇಳದೆ ವ್ರತಗಳು ಆಚರಿಸುವಂತವರು. ಜೈನ ಧರ್ಮ ಶ್ವೇತಾಂಬರ ಹಾಗೂ ದಿಗಂಬರ ಪಂಥಗಳಾಗಿ ಬೆಳೆದು, ಈ ದಿಗಂಬರ ಪಂಥದಲ್ಲಿ ಸ್ತ್ರೀಯರ ನಿರಾಕರಣೆ ಮುಖ್ಯ ತತ್ವವಾಗಿ ಬೆಳೆದುಕೊಂಡು ಬಂದಿದೆ.

**ಇಸ್ಲಾಂ ಧರ್ಮ ಮತ್ತು ಮಹಿಳೆ**

ಇಸ್ಲಾಂ ಧರ್ಮದಲ್ಲಿ ಮೊದಲು ಪೈಗಂಬರರು ಮಹಿಳೆಯರ ಬಗೆಗೆ ಕಾಳಜಿ ಹೊಂದಿದ್ದರು. ಇಸ್ಲಾಂ ಧರ್ಮದಲ್ಲಿ ಅಸ್ಪೃಶ್ಯತೆ ಕಂಡು ಬರುವುದಿಲ್ಲ, ಆದರೆ ಗುಲಾಮ ಪದ್ಧತಿ ಬೆಳೆದುಕೊಂಡು ಬಂದಿದೆ. ಇಸ್ಲಾಂ ಧರ್ಮದಲ್ಲಿ ಮೊದಲು ಬಹುಪತ್ನಿತ್ವ ಆಚರಣೆಯಲ್ಲಿ ಇತ್ತು. ಇದು ನಿರ್ಗತಿಕ ಮಹಿಳೆಗೆ ಆಶ್ರಯ ನೀಡುವ ಒಂದು ಉದ್ದೇಶದಿಂದ ಕೂಡಿದ್ದರೂ, ಅದನ್ನು ಮುಂದೆ ಇಸ್ಲಾಂ ಧರ್ಮ ಗುರುಗಳು ಪುರುಷ ಪರವಾಗಿ ನಿಂತು ಸ್ತ್ರೀಯನ್ನು ಭೋಗದ ವಸ್ತುವಾಗಿ ಮಾತ್ರ ಕಾಣುವ ವ್ಯವಸ್ಥೆ ಚಾಲ್ತಿಯಾಯಿತು. ಇಸ್ಲಾಂ ಧರ್ಮದಲ್ಲಿ ವಿವಾಹ ಬಂಧನವಾಗಿರದೆ ಅದು ಒಂದು ಕರಾರು ಅಥವಾ ಒಪ್ಪಂದವಾಗಿ, ಬೇಡವೆನಿಸಿದಾಗ ಬೇರೆಯಾಗುವುದು ಬೆಳೆಯಿತು. ಸ್ತ್ರೀಯನ್ನು ಭೋಗದ ವಸ್ತುವಾಗಿ ನೋಡಿದ ಪುರುಷನಿಗೆ ಯಾವುದೇ ಶಿಕ್ಷೆಯು ಇಲ್ಲ. ನಂತರ ಮುಸ್ಲಿಂ ಮಹಿಳೆಯರಿಗೆ ಶಿಕ್ಷಣ ನಿರಾಕರಣೆ, ಗುಲಾಮರ ಆಳ್ವಿಕೆಯ ಸಂದರ್ಭದಲ್ಲಿ ಬುರ್ಖಾ ಪದ್ಧತಿ ಜಾರಿ ಮತ್ತು ಮಸೀದಿಗಳಲ್ಲಿ ಮಹಿಳೆಯರಿಗೆ ಪ್ರವೇಶ ನಿರಾಕರಣೆಯ ನಿರ್ಬಂಧನೆಗಳನ್ನು ಹಾಕಲಾಯಿತು.

**ಕ್ರೈಸ್ತ ಧರ್ಮ ಮತ್ತು ಮಹಿಳೆ**

ಕರುಣಾಮಯಿಯಾದ ಕ್ರೈಸ್ತ ಧರ್ಮವು ಪಿತೃ ಪ್ರಧಾನ ಸಂರಚನೆಯನ್ನು ಅನುಸರಿಸಿಕೊಂಡು ಬಂದಿದೆ. ಕ್ರಿಸ್ತನ ಜನನಕ್ಕೆ ಕಾರಣವಾದ ಮೇರಿ ಮಾತೆಯಾಗಿ ಪೂಜ್ಯಳಾದಳು. ಇದರಿಂದ ತಾಯಿಯ ಗೌರವದಿಂದ ಕಾಣುವುದು ಕ್ರೈಸ್ತನ ಮುಖ್ಯ ಉದ್ದೇಶವಾಯಿತು. ಆದರೆ ಹೆಂಡತಿ ಗಂಡನ ಅಧೀನಳಾಗಿ ಮಾತ್ರ ಬದುಕುವುದು. ಸ್ತ್ರೀಯರಿಗೆ ಚರ್ಚುಗಳಲ್ಲಿ ಅವಕಾಶ ಕಲ್ಪಿಸಿದೆ, ಆದರೂ ಕೂಡಾ ಚರ್ಚುಗಳಲ್ಲಿ ಬರಬೇಕಾದ ಕೆಲವೊಂದು ನಿರ್ಬಂಧಗಳನ್ನೂ ಹಾಕಿದೆ (ಪ್ರಾರ್ಥನೆ ಸಲ್ಲಿಸುವ ನಿಯಮವಿಲ್ಲ ).

ಸ್ಥಾಪಿತ ಧರ್ಮಗಳ ಜಂಜಾಟದಿಂದ ಬೇಸತ್ತ, ಕಾನೂನು ಚೌಕಟ್ಟುಗಳನ್ನು ಮುರಿದು, ಮುಂದೆ ಭಕ್ತಿ ಪಂಥಗಳಲ್ಲಿ ಮಹಿಳೆ ಮತ್ತು ಪುರುಷ ಸಹಭಾಗಿಯಾಗಿರುವುದು ಕಂಡುಬರುತ್ತದೆ. ಮಹಿಳೆ ತನ್ನ ಸ್ವಾತಂತ್ರ್ಯಕ್ಕೆ ಧಕ್ಕೆ ತಂದಿರುವಂತಹ ಸ್ಥಾಪಿತ ಧರ್ಮಗಳ

ಕಟ್ಟಳೆಯಿಂದ ಹೊರಬರುವಂತಹ ಪ್ರಯತ್ನಗಳು ನಮ್ಮ ಚರಿತ್ರೆಯಲ್ಲಿ ಕಾಣುತ್ತವೆ. ಮಹಿಳೆ ಭಕ್ತಿ ಪಂಥದಲ್ಲಿ ಸೇರಲು, ಅವಳು ಸ್ಥಾಪಿತ ಧರ್ಮಗಳಲ್ಲಿ ನಿರಾಕರಣೆಗೊಂಡಿರುವುದು, ಶಿಕ್ಷಣದಿಂದ ವಂಚಿತಗೊಂಡಿರುವುದು, ಸಾಮಾಜಿಕ ಕಟ್ಟುಪಾಡುಗಳಿಂದ ಬಿಡುಗಡೆ ಪಡೆಯುವುದಾಗಿತ್ತು.

**ಭಾರತೀಯ ದರ್ಶನಗಳು ಮತ್ತು ಮಹಿಳೆ: ಸಾಂಖ್ಯ ದರ್ಶನ**

ಸಾಂಖ್ಯ ದರ್ಶನ ಮಹಾಭಾರತ ಮತ್ತು ಬೌದ್ಧ ದರ್ಶನಗಳಲ್ಲಿ ಉಲ್ಲೇಖಿಸಿರುವಂತೆ ಅತಿ ಪ್ರಾಚೀನವಾದ ದರ್ಶನ. ಇದು ಅವೈದಿಕ ದರ್ಶನಗಳಲ್ಲಿ ಮೊದಲನೆಯದು. ಇದು ದರ್ಶನಗಳಲ್ಲಿಯೇ ದೇಶಿ ತತ್ವವಾಗಿ ಬೆಳೆದಿರುವುದು. ವೇದ ವಿರೋಧಿಯಾಗಿ ಬೆಳೆದ ಸಾಂಖ್ಯರು ವೇದಗಳ 'ಬ್ರಹ್ಮ ಸತ್ಯದ' ಏಕತ್ವವಾದವನ್ನು ವಿರೋಧಿಸಿ ಪ್ರಕೃತಿ ಮತ್ತು ಪುರುಷದ ದ್ವೈತವಾದವನ್ನು ಮಂಡಿಸಿದರು. ಸಾಂಖ್ಯರ ಪ್ರಕೃತಿ ಮತ್ತು ಪುರುಷತ್ವವು ದ್ವೈತವಾದದ ಮೂಲಕವೇ ಸ್ತ್ರೀ–ಪುರುಷ ದೃಷ್ಟಿಕೋನ ವ್ಯಕ್ತವಾಗಿದೆ. ಪ್ರತಿಯೊಂದು ಕಾರ್ಯಕ್ಕೆ ಕಾರಣವಿದ್ದೇ ಇದೆ ಎಂದು ಪ್ರತಿಪಾದಿಸಿದ್ದಾರೆ. ಪ್ರಕೃತಿ ಮತ್ತು ಪುರುಷದ ಕುರಿತು ಇವೆರಡು ಪರಸ್ಪರ ವಿರೋಧವಾಗಿರದೆ ಪೂರಕವಾಗಿವೆ. ಒಂದರೊಳಗಣ ಅಭಾವವನ್ನು ಮತ್ತೊಂದು ಲಾಭದಾಯಕ ಮಾಡುವದರ ಮೂಲಕ ವಿಶ್ವಚಾಲನೆಗೆ ಕಾರಣವಾಗಿವೆ. ಇದರಿಂದ ಪ್ರಕೃತಿ ಮತ್ತು ಪುರುಷ, ಸ್ತ್ರೀ ಮತ್ತು ಪುರುಷ ಪರಸ್ಪರ ವಿರೋಧಿಗಳಲ್ಲ. ಇವು ಒಂದರಲ್ಲಿ ಒಂದು ಸೇರಿ ಒಬ್ಬರ ಏಳಿಗೆಗೆ ಒಬ್ಬರು ಸಹಕಾರಿಯಾಗಿರುವಂತದ್ದು. ಭೇದವನ್ನು ಮಾಡದೆ ಇಲ್ಲಿ ಸ್ತ್ರೀ–ಪುರುಷ ಸರಿಸಮಾನ, ಪುರುಷ ಮೇಲು ಸ್ತ್ರೀ ಕೀಳು ಎಂಬ ಮನೋಭಾವ ಇಲ್ಲದಿರುವುದು. ಆದರೆ ವೇದಾಂತಗಳಲ್ಲಿ ನಿರಾಕರಿಸುವುದು. ಇದರಿಂದ ಸಾಂಖ್ಯರು ಸ್ತ್ರೀಯರ ಬಗೆಗೆ ಕೊಂಚ ಮಟ್ಟಿನ ಅಸ್ತಿತ್ವ ಅನುಗ್ರಹಿಸಿರುವುದು ಗಮನೀಯ ಸಂಗತಿ.

**ಲೋಕಾಯತ ಮತ್ತು ಮಹಿಳೆ**

ಮಹಿಳೆ ಮೊದಲ ಆವಿಷ್ಕಾರವಾಗಿ ಕೃಷಿ ಬೆಳೆದಿದೆ. ಮಹಿಳೆಯರ ಆರ್ಥಿಕ ಸಾಮಾಜಿಕ ಸ್ಥಾನಮಾನ ಉನ್ನತ ಮಟ್ಟದ್ದು ಆಗಿರಲು ಭಾರತೀಯ ತತ್ವಶಾಸ್ತ್ರದಲ್ಲಿ ಲೋಕಾಯತವು ಪ್ರಕೃತಿ ಪ್ರಧಾನತೆಯನ್ನು ಎತ್ತಿ ಹಿಡಿದಿದೆ. ಇದಕ್ಕೆ ಭಿನ್ನವಾಗಿ ವೈದಿಕ ಸಿದ್ಧಾಂತ ಪುರುಷ ಪ್ರಧಾನತೆಗೆ ಮಹತ್ವವನ್ನು ನೀಡಿದೆ. ಕೃಷಿಯ ಆರಂಭಿಕ ಹಂತದಲ್ಲಿ ಮಹಿಳೆಯ ಪಾತ್ರ ಉತ್ತಮವಾಗಿದೆ. ಕೃಷಿಯ ಕಾರ್ಯದಲ್ಲಿ ಎತ್ತು ಹೂಡಿ ನೇಗಿಲು ಬರುವವರೆಗೆ ಮಹಿಳೆಯದೇ ಕೆಲಸವಾಗಿದ್ದು, ಪುರುಷರು ಬೇಟೆಗಾರಿಕೆಯಿಂದ ಕೃಷಿಯತ್ತ ವಾಲಿದಾಗ ಸ್ತ್ರೀಯ ಸ್ಥಾನಮಾನ ಬದಲಾಗಿ, ಮಾತೃ ಪ್ರಧಾನ ವ್ಯವಸ್ಥೆ ಹೋಗಿ ಪಿತೃ ಪ್ರಧಾನ ವ್ಯವಸ್ಥೆ ಬೆಳೆಯಿತು. ಇದರಿಂದ ಪಶುಸಂಗೋಪನೆಯು ಆರ್ಥಿಕತೆಯ ಪ್ರಧಾನ ವ್ಯವಸ್ಥೆಯಾಯಿತು. ಯಾವ ಸಮಾಜದಲ್ಲಿ ಮಾತೃ ಪ್ರಧಾನ ವ್ಯವಸ್ಥೆಯಲ್ಲಿರುವ ಬುಡಕಟ್ಟುಗಳು ಸ್ತ್ರೀ ದೇವತೆಗಳ ಬಗ್ಗೆ ಉತ್ತಮ ಸ್ಥಾನವಿದೆ. ಇದರಲ್ಲಿ ಮಹಿಳೆಯ ಸ್ಥಾನ ಉನ್ನತ ಮಟ್ಟದಲ್ಲಿದ್ದು, ಕೃಷಿಗಾರಿಕೆ ಆರ್ಥಿಕ ಮೂಲದಿಂದ ಹಿಂದೆ ಸರಿದು ಸ್ತ್ರೀ ದೇವತೆ ಆರಾಧನೆ ಕಡಿಮೆಯಾಗಿ ಪುರುಷ

ದೇವತೆಗಳು ಮೇಲೇರಿವೆ. ಇಲ್ಲಿ ಹೆಣ್ಣು ದೇವತೆಗಳು ಕಾರ್ಯ ಕಡಿಮೆ ಮಾಡಿ ಪುರುಷ ದೇವತೆಗಳ ಶಕ್ತಿಯನ್ನು ಉನ್ನತ ಮಟ್ಟಕ್ಕೆ ತಂದು ಸ್ತ್ರೀ ದೇವತೆಗಳನ್ನು ಪುರುಷ ದೇವತೆಗಳ ಪತ್ನಿಯರನ್ನಾಗಿ ಜೋಡಿಸುವಂತದ್ದು. ಈ ಸಂಗತಿ ಗುರುತಿಸಿದಾಗ ನಾಗರಿಕತೆ ಉಗಮದಿಂದ ಮಾತೃ ಪ್ರಧಾನ ವ್ಯವಸ್ಥೆಯಿದ್ದ ಈ ಸಮಾಜ ಮಹಿಳೆಯನ್ನು ದಮನಗೊಳಿಸುವುದು, ಆರ್ಥಿಕತೆಯ ಮೂಲವನ್ನು ಕಸಿದು ಪುರುಷ ಪ್ರಧಾನ ವ್ಯವಸ್ಥೆಯನ್ನು ಗಟ್ಟಿಗೊಳಿಸಲಾಗಿದೆ.

**ಪಾಶುಪತ ದರ್ಶನ ಮತ್ತು ಮಹಿಳೆ**

ಶೈವ ಎಂಬ ಬೃಹತ್ ಪರಂಪರೆಯ ವೈದಿಕರ ವಿರುದ್ಧ ಸುದೀರ್ಘ ಹೋರಾಟದಲ್ಲಿ ಮೂಡಿ ಬಂದ ದರ್ಶನಗಳಲ್ಲಿ ಪಾಶುಪತ ಸನಾತನ ಮತ್ತು ಪ್ರಪ್ರಥಮ ದರ್ಶನವಾಗಿದೆ. ವೈದಿಕ ಮತ್ತು ಪಾಶುಪತ ಸಂಘರ್ಷಗಳು ಸಿಂಧೂ ಮೂಲ ಬೇರುಗಳನ್ನು ಹೊಂದಿದೆ. ದೇವರ ಅಸ್ತಿತ್ವ ಒಪ್ಪಿದ ಮತಗಳು ವ್ಯವಸ್ಥೆಯ ಪರವಾಗಿ ಪ್ರಭುತ್ವದ ಸಮರ್ಥನೆಗೆ ನಿಂತು ಜನ ವಿರೋಧಿಯಾದ್ದು ಒಂದೆಡೆ ನಿಂತರೆ, ದೇವರನ್ನು ಒಪ್ಪಿದ ನಾಸ್ತಿಕ ಮತಗಳು ಜನಪರವಾಗಿ ವ್ಯವಸ್ಥೆಯ ವಿರುದ್ಧ ನಿಂತವು.

**ವಚನಕಾರರು ಮತ್ತು ಮಹಿಳೆ**

ವೈದಿಕ ವಿರೋಧಿಯಾಗಿ ಹನ್ನೆರಡನೆಯ ಶತಮಾನದಲ್ಲಿ ಬೆಳೆದು ಬಂದ ಶರಣ ಚಳವಳಿಯು ಸಮಾಜದಲ್ಲಿರುವಂತಹ ಕಳಂಕವನ್ನು ಕಿತ್ತೆಸೆಯುವ ಸಲುವಾಗಿ ಮತ್ತು ಪ್ರಾಚೀನ ಕಾಲದಿಂದಲೂ ಕೂಡಾ ಶೋಷಣೆಗೊಳಗಾಗಿ ಎಲ್ಲಾ ಕ್ಷೇತ್ರದಲ್ಲಿ ಸ್ತ್ರೀಯನ್ನು ದಮನ ಮಾಡಿ ಅವಳ ಮೇಲೆ ಸವಾರಿ ಮಾಡುವ ಸನಾತನ ಧರ್ಮದ ಚೌಕಟ್ಟನ್ನು ಮೀರಿ, ಸಮಾಜದಲ್ಲಿನ ಜಾತಿ ಮತ ಭೇದ ಒಡೆದು ಹಾಕಿ, ಸ್ತ್ರೀ–ಪುರುಷವೆಂಬ ಭೇದವನ್ನು ತೊಡೆದು, ಇಬ್ಬರೂ ಕೌಟುಂಬಿಕ ಯಶಸ್ಸಿಗೆ ಪಾಲುದಾರರು ಎನ್ನುವ ರೀತಿಯಲ್ಲಿ ವಚನಕಾರರ ಕಾಲದ ಮಹಿಳೆಯರು ವಚನಗಳನ್ನು ರಚನೆ ಮಾಡಿದ್ದಾರೆ. ಹನ್ನೆರಡನೆಯ ಶತಮಾನದಿಂದ ಶಿಕ್ಷಣದಿಂದ ಮತ್ತು ಧಾರ್ಮಿಕ ಕಾರ್ಯದಿಂದ ದೂರ ನಿಂತ ಮಹಿಳೆ ಶರಣರ ಕಾಲದಲ್ಲಿ ಪುರುಷನಿಗೆ ಸರಿ ಸಮವೆಂಬುದನ್ನು ತೋರಿಸಿದ್ದಾಳೆ. ಆ ಸಂದರ್ಭದಲ್ಲಿ ಅನೇಕ ವಚನಕಾರ್ತಿಯರು ವಚನಗಳ ರಚನೆ ಮಾಡಿರುವುದು ಗೋಚರಿಸುತ್ತದೆ. ವೈದಿಕ ಧರ್ಮದಲ್ಲಿರುವ ಮೌಢ್ಯ ಆಚರಣೆಗಳನ್ನು ತೊಡೆದು ಹಾಕಿ ಧಾರ್ಮಿಕವಾದಂತ ಕಾರ್ಯಗಳಲ್ಲಿ ಸ್ತ್ರೀ ಸಹ ಭಾಗಿಯಾಗಿರುವುದು ಕಾಣುತ್ತೇವೆ. ಸ್ತ್ರೀ–ಪುರುಷ ಅಂಗ ಭೇದ ನೀತಿಯನ್ನು ತೊಡೆದು ಹಾಕಿ ದೈಹಿಕ ವ್ಯತ್ಯಾಸದಿಂದ ಸ್ತ್ರೀ–ಪುರುಷ ಮಾತ್ರ ಬೇರೆ, ಆದರೆ ಇಬ್ಬರಲ್ಲಿಯೂ ಇರುವ ಆತ್ಮ ಒಂದೇ ಎಂಬ ಭಾವನೆ ಹುಟ್ಟು ಹಾಕಿದರು. ಪ್ರಾಚೀನ ಕಾಲದಿಂದಲೂ ಹುಟ್ಟಿಕೊಂಡು ಬಂದಿರುವ ಭಾವನೆ ತವರಿನ ಯಶಸ್ವಿ ಹೆಣ್ಣು ತೋರು ಎಂದು ಭಾವಿಸಿ ಅವಳನ್ನು ಮಾಯೆಯಾಗಿ ಮಾಡಿದರು. ಇದರಿಂದ ಮಹಿಳೆಯು ಮಾಯೆ ಅಲ್ಲ ಎಂದು ಬಿಡುಗಡೆ ಮಾಡಿ ಮತ್ತು ಪಿತೃ ಪ್ರಧಾನ ವ್ಯವಸ್ಥೆಯ ಸೆರೆಯಿಂದ ಬಿಡುಗಡೆಗೊಳಿಸಿದ್ದರು. ಉದಾಹರಣೆಗಾಗಿ

ಅಕ್ಕಮಹಾದೇವಿಯಂತಹ ವಚನಕಾರ್ತಿ ಲೋಕದ ಗಂಡಂದಿರನ್ನು ತಿರಸ್ಕರಿಸಿ ಪಾರಮಾರ್ಥಿಕವಾದ ಗಂಡನ್ನು ತನ್ನ ಆದರ್ಶ ಪ್ರಿಯಕರನ್ನಾಗಿ, ಪ್ರೇಮಸಖನಾಗಿ, ನಲ್ಲನಾಗಿ ಕಂಡಿರುವುದು.

ಮೀರಾಬಾಯಿ 16ನೇ ಶತಮಾನದಲ್ಲಿ ಹುಟ್ಟಿ ಬೆಳೆದ ವಿಷ್ಣು ಭಕ್ತಿಪಂಥದ ಮಹಿಳೆ. ಆಧ್ಯಾತ್ಮಿಕ ವಾತಾವರಣದಲ್ಲಿ ಬೆಳೆದ ಮೀರಾ ಬೋಜರಾಜನೊಡನೆ ವೈವಾಹಿಕ ಜೀವನ ಆರಂಭಿಸಿದಳು. 23-24 ವಯೋಮಾನದಲ್ಲಿ ಗಂಡನ ಅಕಾಲಿಕ ಮರಣದಿಂದ ವೈಧವ್ಯಕ್ಕೆ ತುತ್ತಾಗುತ್ತಾಳೆ. ವೈರಾಗಿಣಿಯಾಗಿ ವಿರೋಧದ ನಡುವೆಯೂ ದೇವಸ್ಥಾನದಲ್ಲಿ ಕೃಷ್ಣನ ಭಕ್ತಿಯ ಭಜನೆಯಲ್ಲಿ ತಲ್ಲಣವಾಗುತ್ತಾಳೆ.

ಬಸವರಾಜ ಕಲ್ಗುಡಿ ಅವರು ಧರ್ಮ ಮತ್ತು ಭಕ್ತಿ ಪಂಥಗಳು ಪರಸ್ಪರ ವೈರುಧ್ಯ ನೆಲೆಗಳನ್ನು ಕುರಿತು ಹೀಗೆ ಹೇಳುತ್ತಾರೆ: "ಧರ್ಮದ ಹೆಸರಿನಲ್ಲಿ ಎರಡು ರೀತಿಯ ದಾರಿಗಳು ಕವಲೊಡೆದಿರಬಹುದು". ಅದು ನಿಜವೂ ಹೌದು. ಒಂದನೇ ಮಾರ್ಗ ಸ್ಥಾಪಿತ ಧರ್ಮ. ಮನುಷ್ಯನನ್ನು ತನ್ನ ಪ್ರಭುತ್ವದಲ್ಲಿಡುವ, ಮಾನವನ ವೈಚಾರಿಕ ಮೌಲ್ಯಗಳಿಗೆ ಅವಕಾಶವೇ ಕೊಡದಿರುವ ಹಾಗೂ ತನ್ನಿಂದಲೇ ಸಕಲವೂ ಎಂಬ ಭ್ರಮೆಯನ್ನು ಬಿತ್ತುವ ವಿಚಾರಗಳು. ಎರಡನೇ ಮಾರ್ಗ ಭಕ್ತಿಪಂಥ. ಮೊದಲನೆಯದರ ವಿರುದ್ಧ ತನ್ನ ಸಾಮರಸ್ಯವನ್ನು ಎತ್ತಿ ಕಟ್ಟುತ್ತದೆ. ಇದು ಮುಖ್ಯವಾಗಿ ಮಾನವನ ಅಸ್ತಿತ್ವವನ್ನು ಕುರಿತು ಯೋಚನೆ ಮಾಡಲು ಬಯಸುತ್ತದೆ. ತನ್ನಲ್ಲಿ ಹೋರಾಟ, ಹತಾಶೆ, ನೋವುಗಳೊಡನೆ ಇತಿಹಾಸದಲ್ಲಿ ಮಾನವನ ಬದುಕಿನ ಮೌಲ್ಯಗಳನ್ನು ಎತ್ತಿ ಹಿಡಿಯುವ ಪ್ರಯತ್ನ ಮಾಡುತ್ತದೆ.

ಈ ಮೇಲಿನ ಅಭಿಪ್ರಾಯಕ್ಕೆ ಪೂರಕವಾಗಿ ಸ್ಥಾಪಿತ ಧರ್ಮ ತನ್ನದೇ ಆದಂತಹ ಚೌಕಟ್ಟನ್ನು, ಕಾನೂನನ್ನು ಒಳಗೊಂಡು ಜನರಲ್ಲಿ ಧರ್ಮದ ಭಯವನ್ನು ಹುಟ್ಟಿಸಿ, ಅವರನ್ನು ನಿಯಂತ್ರಿಸುವ ಕಾರ್ಯವನ್ನು ಮಾಡುತ್ತದೆ. ಇಲ್ಲಿಯ ಜನರು ಆ ನಿಯಮಗಳಿಗೆ ಒಳಗಾಗಿ ಧರ್ಮದ ವಿರುದ್ಧವಾಗಿ ಮಾತನಾಡುವಂತಹ ಯಾವ ಸಾಹಸಕ್ಕೆ ಹೋಗದೇ, ಆಜ್ಞೆಗಳನ್ನು ಪರಿಪಾಲಿಸುತ್ತಾ ಧರ್ಮದ ಚೌಕಟ್ಟಿನಲ್ಲಿ ಬಂಧಿಯಾಗುತ್ತಿದ್ದಾರೆ. ಮಹಿಳೆಯರು ಮನು ಹೇಳಿದಂತೆ ಪತಿಧರ್ಮವನ್ನು ಪಾಲನೆ ಮಾಡಿಕೊಂಡು ಮನೆಯಲ್ಲಿ ಬಂಧಿಯಾಗಿದ್ದಾರೆ. ಇದನ್ನು ಮೀರಿದರೆ ಸಾಮಾಜಿಕ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ ಎಂದು ಭಯವನ್ನು ಹುಟ್ಟಿಸಲಾಗಿದೆ. ಭಕ್ತಿ ಪಂಥದ ಸಾಧಕಿಯರ, ಅನುಭಾವಿಗಳ ಒಡನಾಟದಿಂದ ಜನಸಾಮಾನ್ಯರು ಅರಿವಿನ ಪ್ರಜ್ಞೆಯನ್ನು ಪಡೆಯಬೇಕಾಗಿದೆ. ಅನೇಕ ಸಮಸ್ಯೆಗಳ ನಡುವೆ ಅಕ್ಕಮಹಾದೇವಿ, ಮೀರಾ ಸ್ಥಾಪಿತ ಧರ್ಮಗಳ ವಿರುದ್ಧ ತಿರುಗಿ ನಿಂತಂತ ಪ್ರಯತ್ನಗಳು ಇಂದಿನ ಮಹಿಳೆಯರಿಗೂ ಆದರ್ಶವಾಗಬೇಕಾಗಿದೆ. ಇಂದಿನ ಆಧುನಿಕತೆ ಅನೇಕ ಸಂಕಟಗಳಿಂದ ಪಾರಾಗಲು ಅನೇಕ ಮಾರ್ಗಗಳನ್ನು ಅಕ್ಕ-ಮೀರಾರ ತಾತ್ವಿಕ ಬದುಕಿನಿಂದ ಅರಿಯಬೇಕಾಗಿದೆ.

## ಪರಾಮರ್ಶನ ಗ್ರಂಥಗಳು


1. ಶಿವಾನಂದ ಎಸ್. ವಿರಕ್ತಮಠ, (2010), ಮಹಿಳೆ ಮತ್ತು ಧರ್ಮ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
2. ಜ್ಯೋತಿ ಶಶಿಕುಮಾರ, (2007), ಮಹಿಳಾ ಸಾಮಾಜಿಕತೆ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
3. ಸಂಪಾದಕರು, (2003), ಮಹಿಳಾ ಅಧ್ಯಯನ (ಸಂಪುಟ 5, ಸಂಚಿಕೆ 1–2), ಹಂಪಿ: ಮಹಿಳಾ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ.
4. ನಂದನ, (2004), ಬುದ್ಧ ಚರಿತೆ ಮತ್ತು ಧಮ್ಮಸಾರ, ಬೆಂಗಳೂರು: ಬುದ್ಧ ವಚನ ಟ್ರಸ್ಟ್.
5. ದೇವಿಪ್ರಸಾದ ಚಟ್ಟೋಪಾಧ್ಯಾಯ, (2011), ಲೋಕಾಯತ, ಬೆಂಗಳೂರು: ನವಕರ್ನಾಟಕ ಪ್ರಕಾಶನ.
6. ಹಿರೇಮಠ ಎಸ್.ಎಸ್., (2003), ಪಾಶುಪತ ದರ್ಶನ, ಗದಗ: ವೀರಶೈವ ಅಧ್ಯಯನ ಸಂಸ್ಥೆ, ತೋಂಟದಾರ್ಯ ಮಠ.
7. ತಾಪಿ ಧರ್ಮರಾವ್, (2012), ದೇವಾಲಯಗಳು ಮತ್ತು ಲೈಂಗಿಕ ಶಿಲ್ಪ, ಬಳ್ಳಾರಿ: ಲೋಹಿಯಾ ಪ್ರಕಾಶನ.